# ಹಂಪಿ ಮತ್ತು ಜೈನ ಧರ್ಮ

ಎನ್.ಎಸ್. ವೀರೇಶ್ ಉತ್ತಂಗಿ

ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ.

DOI: https://doi.org/10.5281/zenodo.16678194

## ABSTRACT:

ಹಂಪಿ ಧರ್ಮದ ನೆಲೆಬೀಡು, ಹತ್ತು ಹಲವು ಧರ್ಮ ಪಂಥಗಳ ಸಂಗಮ ಕ್ಷೇತ್ರ. ಸಹಸ್ರಾರು ವರ್ಷಗಳಿಂದಲೂ ಪಂಪಾಂಬಿಕೆಯ ಶಕ್ತಿ ಕೇಂದ್ರವಾಗಿದ್ದ ಹಂಪಿಗೆ ಮೊದಲು ಶೈವ ಧರ್ಮ ಪ್ರವೇಶಿಸಿತು. ನಂತರ ಬೌದ್ಧ, ಜೈನ, ವೀರಶೈವ, ಇಸ್ಲಾಂ, ವೈಷ್ಣವ, ಶಾಕ್ತ ಮೊದಲಾದ ಧರ್ಮ ಪಂಥಗಳು ಹಂಪಿ ಪ್ರವೇಶಿಸಿ ತಮ್ಮದೇ ಆದ ನೆಲೆ ಕಂಡುಕೊಂಡದ್ದನ್ನು ನಾವು ಕಾಣಬಹುದು. ಈ ಧರ್ಮ ಪಂಥಗಳು ಹಂಪಿಯನ್ನು ಯಾವಾಗ ಪ್ರವೇಶಿಸಿದವು ಎಂಬುದನ್ನು ನಿರ್ದಿಷ್ಟವಾಗಿ ಹೇಳಲು ಕಷ್ಟಸಾಧ್ಯ. ಕ್ರಿಸ್ತಪೂರ್ವದಿಂದಲೂ ಇಲ್ಲಿ ಧರ್ಮದ ಚಹರೆಗಳು ಕಂಡುಬರುತ್ತವೆ. ಮೌರ್ಯ ಸಾಮ್ರಾಟ ಅಶೋಕನಿಂದ ಬೌದ್ಧ ಧರ್ಮ ದಕ್ಷಿಣ ಭಾರತ ಪ್ರವೇಶಿಸಿದಂತೆ, ಭದ್ರಬಾಹು ಮುನಿಯಿಂದ ಜೈನ ಧರ್ಮ ಕರ್ನಾಟಕ ಪ್ರವೇಶಿಸಿತು. ಹಂಪಿಯನ್ನು ಜೈನ ಧರ್ಮ ಯಾವಾಗ ಪ್ರವೇಶಿಸಿತು ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿ ದೊರೆಯುವುದಿಲ್ಲ. ಮಹಾನವಮಿ ದಿಬ್ಬದ ಮುಂದೆ ದೊರೆತ ಶಿಲ್ಪಪಟ್ಟಿಕೆಯಲ್ಲಿರುವ ಪ್ರಾಕೃತ ಶಾಸನ ಆಧಾರದಿಂದ ಜೈನ ಧರ್ಮವು ಬಹುಶಃ ಕ್ರಿಸ್ತಶಕ 12ನೇ ಶತಮಾನದಲ್ಲಿ ಹಂಪಿಯನ್ನು ಪ್ರವೇಶಿಸಿತೆಂದು ಹೇಳಬಹುದಾಗಿದೆ.

## KEYWORDS:

ಹಂಪಿ, ಜೈನ ಧರ್ಮ, ಬಸದಿ, ಧರ್ಮಭೂಷಣ ದೇಶಿಕ ಭಟ್ಟಾರಕ, ಇಮ್ಮಡಿ ದೇವರಾಯ, ಕುಂತು ಜಿನನಾಥನ ಬಸದಿ, ದಂಡಾಧಿಪತಿ ಇರುಗಪ್ಪ.

ಪ್ರಾಚೀನ ಕಾಲದಿಂದಲೂ ಹಂಪಿ ಜನವಸತಿಯ ಕೇಂದ್ರವಾಗಿತ್ತು. ಇಲ್ಲಿ ಪಂಪಾಂಬಿಕೆ ವಿರೂಪಾಕ್ಷನನ್ನು ನೆನೆಸಿದ ಮೇಲೆ ಶೈವ ಧರ್ಮ ಆರಂಭವಾಯಿತು. ನಂತರ ಮೌರ್ಯ ಸಾಮ್ರಾಟ ಅಶೋಕ ಬೌದ್ಧ ಧರ್ಮ ಪ್ರಚಾರ ಮಾಡುವ ಸಲುವಾಗಿ ಬುದ್ಧನ ಸಂದೇಶ ಸಾರುವ ಅನೇಕ ಶಾಸನಗಳನ್ನು ದೇಶದ ನಾನಾ ಭಾಗಗಳಲ್ಲಿ ಹಾಕಿಸಿದ. ಅದರಂತೆ ಕರ್ನಾಟಕದ ಸನ್ನತಿ, ಮಸ್ಕಿ, ಕೊಪ್ಪಳ, ಉದಯ, ಗೋಳಂ, ಸಿದ್ದಾಪುರ, ಬ್ರಹ್ಮಗಿರಿ, ಜಟ್ಟಂಗಿ ರಾಮೇಶ್ವರ ಮೊದಲಾದ ಕಡೆ ಹೆಬ್ಬಂಡೆಗಳಲ್ಲಿ ಶಾಸನ ಬರೆಸಲಾಗಿದೆ. ಹಂಪಿಯ ಪೂರ್ವಕ್ಕೆ ಇರುವ ಸಿದ್ದಾಪುರ,

ಪಶ್ಚಿಮಕ್ಕೆ ಕೊಪ್ಪಳದಲ್ಲಿ ಅಶೋಕನ ಬೌದ್ಧ ಧರ್ಮ ಕುರಿತ ಶಾಸನಗಳು ದೊರೆಯುವುದರಿಂದ ಹಂಪಿಯಲ್ಲಿಯೂ ಅಶೋಕನ ಶಾಸನ ಬಂಡೆಗಲ್ಲಿನಲ್ಲಿರಬಹುದಾಗಿದೆ.

ಕ್ರಿ.ಶ 3ನೇ ಶತಮಾನದಲ್ಲಿ ಭದ್ರಬಾಹು ಮುನಿಯಿಂದ ಕರ್ನಾಟಕದ ಶ್ರವಣಬೆಳಗೊಳಕ್ಕೆ ಪ್ರವೇಶಿಸಿದ ಜೈನ ಧರ್ಮ ಹಂಪಿಯ ಮೂಲಕ ಹೋಗಿರಬೇಕೆನಿಸುತ್ತದೆ. ಪುರಾಣ ಪ್ರಸಿದ್ಧ ತೀರ್ಥಕ್ಷೇತ್ರ ಹಂಪಿಗೆ ಭದ್ರಬಾಹು ಮುನಿ ಬಂದು ನಂತರ ಶ್ರವಣಬೆಳಗೊಳಕ್ಕೆ ಹೋಗಿರಬಹುದುದಾದ ಸಾಧ್ಯತೆ ಇದೆ. ಮಹಾನವಮಿ ದಿಬ್ಬದ ಮುಂದೆ ದೊರೆತ ಶಿಲ್ಪಪಟ್ಟಿಗೆಯಲ್ಲಿರುವ ಕ್ರಿ.ಶ 1–2ನೇ ಶತಮಾನದ ಪ್ರಾಕೃತ ಭಾಷೆಯ ಶಾಸನವು "ತರಸಪುತಸ.....ದಾನಂ"[1] ಎಂದು ಉಲ್ಲೇಖಿಸಿದೆ. ಈ ಶಾಸನ ತರಸ ಎಂಬ ವ್ಯಕ್ತಿಯ ಮಗನು ದಾನ ನೀಡಿದ್ದನ್ನು ದಾಖಲಿಸುತ್ತದೆ. 'ತರಸ' ಎಂಬುವನು ಜೈನ ಧರ್ಮೀಯನಾಗಿರಬೇಕು. ಅವನ ಮಗ ಇಲ್ಲಿನ ಧರ್ಮ ಗುರುಗಳಿಗೋ ಅಥವಾ ಜೈನ ಬಸದಿಗೋ ದಾನ ಮಾಡಿರಬೇಕೆನಿಸುತ್ತದೆ. ಈ ಮೂಲಕ ಕ್ರಿ.ಶ ೧–೨ನೇ ಶತಮಾನದ ವೇಳೆಗೆ ಜೈನ ಧರ್ಮ ಹಂಪಿಯನ್ನು ಪ್ರವೇಶಿಸಿತೆಂದು ಹೇಳಬಹುದಾಗಿದೆ.

ಹಂಪಿಯ ಜೈನ ಧರ್ಮವನ್ನು ಕುರಿತು ಮೂರು ನೆಲೆಗಳಿಂದ ವಿಶ್ಲೇಷಿಸಬಹುದಾಗಿದೆ.

1. **ಜೈನ ಬಸದಿಗಳು**
2. **ಧರ್ಮ ಗುರುಗಳು**
3. **ಸಾಮಾನ್ಯ ವ್ಯಕ್ತಿಗಳು**

**೧) ಜೈನ ಬಸದಿಗಳು:** ಒಂದು ಪ್ರದೇಶದಲ್ಲಿ ಯಾವ ಧರ್ಮೀಯರೇ ಆಗಲಿ ಹಲವು ವರ್ಷಗಳಿಂದ ವಾಸಿಸುತ್ತಾ ಬಂದು ಅಲ್ಲಿಯವರೇ ಆಗಿ ನೆಲೆಗೊಂಡಾಗ ತಮ್ಮ ಧರ್ಮ ಪರಂಪರೆಯ ದೇವರ, ಆರಾಧ್ಯ ದೈವಗಳ ದೇವಾಲಯ, ಬಸದಿ ಅಥವಾ ಪ್ರಾರ್ಥನಾ ಮಂದಿರಗಳನ್ನು ಕಟ್ಟುವುದು, ಆ ಮೂಲಕ ಮಾನಸಿಕ ನೆಮ್ಮದಿ ಕಂಡುಕೊಳ್ಳುವುದು ಸಹಜವಾಗಿದೆ. ಹಂಪಿಗೆ ಬಹುಶಃ ಕ್ರಿ.ಶ. 1–2ನೇ ಶತಮಾನದಲ್ಲಿ ಪ್ರವೇಶ ಪಡೆದ ಜೈನ ಧರ್ಮ ತನ್ನ ತತ್ವ ಆದರ್ಶಗಳ ಮೂಲಕ ಜನಸಾಮಾನ್ಯರಿಗೆ ಹತ್ತಿರವಾಗಿ ಬೆಳೆದಂತೆ ತೋರುತ್ತದೆ. ಕ್ರಿ.ಶ ೮–೧೦ನೇ ಶತಮಾನದ ವೇಳೆಗೆ ಹಂಪಿಯಲ್ಲಿ ಜೈನ ಧರ್ಮ ಸಂಪೂರ್ಣವಾಗಿ ಜನಮನ್ನಣೆ ಪಡೆದುಕೊಂಡಿರಬಹುದು. ಈ ಕಾಲಕ್ಕೆ ಕರ್ನಾಟಕದಲ್ಲಿ ಬಹು ಸಂಖ್ಯೆಯ ಅನುಯಾಯಿಗಳನ್ನು ಜೈನ ಧರ್ಮ ಹೊಂದಿ ಬೆಳೆದಿದ್ದನ್ನು ಅನೇಕ ಕಾವ್ಯ ಕೃತಿಗಳು ಸಾಕ್ಷೀಕರಿಸುತ್ತವೆ.

12ನೇ ಶತಮಾನದ ವಚನ ಚಳುವಳಿಯ ಪ್ರವಾಹದಲ್ಲಿ ಜೈನರು ಲೀನವಾಗಿ ಶರಣರಾಗುವುದರ ಮೂಲಕ ಬಹು ಸಂಖ್ಯೆಯಿಂದ ಕುಗ್ಗಿ ಅಲ್ಪ ಮತವಾಯಿತು. ವಿಜಯನಗರ ರಾಜ್ಯ ರಚನೆಯ ನಂತರ ದಕ್ಷಿಣದ ಶ್ರವಣಬೆಳಗೊಳದಲ್ಲಿಯೂ ಸಹ ಅವನತಿಯ ಹಾದಿ ಹಿಡಿದಿತ್ತು ಎಂಬ ವಿಚಾರ ಒಂದನೇ ಬುಕ್ಕರಾಯನ ಶ್ರವಣಬೆಳಗೊಳದ ಕ್ರಿ.ಶ. ೧೩೬೮ ಶಾಸನದಿಂದ ತಿಳಿದು ಬರುತ್ತದೆ. ಆದರೆ ರಾಜಧಾನಿ ಹಂಪಿಯಲ್ಲಿ ಒಂದನೇ ಬುಕ್ಕರಾಯನ ಮತ್ತು ಅವನ ಮಗ ಎರಡನೇ ಹರಿಹರನ ಕಾಲದಲ್ಲಿ ಜೈನರು ಪ್ರಬಲರಾಗಿದ್ದರು ಎಂದು ಕ್ರಿ.ಶ. ೧೩೮೬ ರ ಹಂಪಿ ಶಾಸನದಿಂದ ತಿಳಿದು ಬರುತ್ತದೆ. ಏಕೆಂದರೆ ಈ ಕಾಲದಲ್ಲಿ ದಕ್ಷಿಣದ ಶ್ರವಣಬೆಳಗೊಳ ಪರಿಸರದಲ್ಲಿ ಜೈನ ಧರ್ಮ ದುರ್ಬಲಗೊಂಡು ತನ್ನ ಅಸ್ತಿತ್ವಕ್ಕೆ ಹೋರಾಡುತ್ತಿದ್ದರೆ ಹಂಪಿಯಲ್ಲಿ ಅದು ತನ್ನ ಪ್ರಾಬಲ್ಯ ಮೆರೆಯಲು ಹವಣಿಸುತ್ತಿತ್ತೆಂದು ತಿಳಿದು ಬರುತ್ತದೆ.

ಹಂಪಿಯಲ್ಲಿ ಜೈನರಿಗೆ ಪ್ರೋತ್ಸಾಹ, ಮನ್ನಣೆ, ಸ್ವತಂತ್ರವಾಗಿ ಬದುಕುವ ಅವಕಾಶ ಕಲ್ಪಿಸಿತ್ತು. ಬಹುಶಃ ಶ್ರವಣಬೆಳಗೊಳದ ಜೈನ ವೈಷ್ಣವರ ನಡುವಿನ ಧಾರ್ಮಿಕ ಸಂಘರ್ಷದ ಅರಿವಿದ್ದ ಎರಡನೇ ಹರಿಹರ ತನ್ನ ರಾಜಧಾನಿಯಲ್ಲಿ ಜೈನರಿಗೆ ಮುಕ್ತ ಅವಕಾಶ ಕಲ್ಪಿಸಿಕೊಟ್ಟು ಅವರಿಚ್ಛೆಯಂತೆ ಬಾಳಲು ಅನುವುಮಾಡಿಕೊಟ್ಟಂತೆ ತೋರುತ್ತದೆ. ಏಕೆಂದರೆ ಒಂದನೇ ಬುಕ್ಕರಾಯ ಶ್ರವಣಬೆಳಗೊಳದಲ್ಲಿ ಜೈನರಿಗೂ ವೈಷ್ಣವರಿಗೂ ನಡೆದ ಧಾರ್ಮಿಕ ಸಂಘರ್ಷವನ್ನು ಪರಿಹರಿಸಲು ವಿಚಾರಣೆ ಮಾಡುವ ಸಮಯದಲ್ಲಿ ಅರಸನ ಜೊತೆ ಯುವರಾಜ ಎರಡನೇ ಹರಿಹರ ಪಾಲ್ಗೊಂಡಿರಬೇಕೆನಿಸುತ್ತದೆ. ಮುಂದೆ ತಾನು ಅರಸನಾದ ಮೇಲೆ ತನ್ನ ರಾಜಧಾನಿಯಲ್ಲಿ ಸಕಲರು ಸುಖ ಶಾಂತಿ ಸೌಖ್ಯದಿಂದ ಬಾಳಲು ವಾತಾವರಣ ನಿರ್ಮಿಸಲು ಪ್ರಯತ್ನಿಸಿರಬೇಕು. ಎರಡನೇ ಹರಿಹರನ ಕಾಲಕ್ಕೆ ಹಂಪಿಯಲ್ಲಿ ಜೈನ ಧರ್ಮ ಕುಗ್ಗದೆ ಪ್ರಾಬಲ್ಯ ಹೊಂದಿತ್ತೆಂದು ತಿಳಿದು ಬರುತ್ತದೆ. ಅರಸ ಪ್ರಬಲರಾದ ಜೈನರ ಮನ ಗೆಲ್ಲಲು ರಾಜಧಾನಿಯಲ್ಲಿ ತನ್ನ ದಂಡಾಧಿಪತಿ ಇರುಗಪ್ಪನ ಮೂಲಕ ಜೈನ ಬಸದಿಯನ್ನು ಕಟ್ಟಿಸಿದ್ದನ್ನ ಕ್ರಿ.ಶ ೧೩೮೬ ರ ಶಾಸನವು "ಯತ್ರ ಕ್ರೀಡಂತಿ ಬಾಲಿಕಾಃ ತಸ್ಮಿನ್ನಿರುಗ ದಂಡೇಶಃ ಪುರೇ ಚಾರು ಶಿಲಾಮಯಂ ಶ್ರೀ ಕುಂಥುಜಿನನಾಥಸ್ಯ ಚೈತ್ಯಾಲಯ ಮಚೀಕರತ್"[2] ಎಂದು ದಾಖಲಿಸುತ್ತದೆ. ಅಂದರೆ ಇರುಗ ದಂಡೇಶನು ಕಲ್ಲಿನ ಶ್ರೀಕುಂತು ಜಿನ ನಾಥನ ಚೈತ್ಯಾಲಯ (ಬಸದಿ) ಕಟ್ಟಿಸಿರುವ ವಿಷಯ ತಿಳಿಸುತ್ತದೆ. ಇದನ್ನು ಅವನು "ಹರಿಹರ ಧರಣೇಶ ಪ್ರಾಜ್ಯಸಾಮ್ರಾಜ್ಯ ಲಕ್ಷ್ಮೀಕುವಲಯ... ಇರುಗಪ್ಪ ಧರಣೇಶಾಸ್ಸಿಂಹನಂದ್ರ್ಯರ್ಯ..... ಸ್ವಸ್ತಿ ಶಕ ವರ್ಷೇ ೧೩೦೭ ಪ್ರವರ್ತ ಮಾನೆಕ್ರೋಧನ ವತ್ಸರೆ ಪಾಲ್ಗುನ ಮಾಸೇ ಕೃಷ್ಣಪಕ್ಷೇ ದ್ವಿತೀಯಾಯಾಂ ತಿಥೌ ಶುಕ್ರವಾರೇ

ಅಸ್ತಿ ವಿಸ್ತೀರ್ಣ ಕರ್ಣಾಟ ಧರಾಮಂಡಲ ಮಧ್ಯಗಃ ವಿಷಯಃ ಕುಂತೋ

ನಾಮ್ನಾ..."[3] ಎಂದು ಉಲ್ಲೇಖಿಸಿದೆ. ಹರಿಹರನ ದಂಡಾಧಿಪತಿ ಇರುಗಪ್ಪ ಸಿಂಹದಂತೆ ಶೌರ್ಯದಿಂದ ಇದ್ದವನು. ಸಾಮ್ರಾಜ್ಯಲಕ್ಷ್ಮೀಯನ್ನು ಸದಾ ಕಾಪಾಡುತ್ತಾನೆ. ಇವನು ಕ್ರಿ.ಶ. ೨೬–೨–೧೩೮೬ ರ ಕ್ರೋಧನ ಸಂವತ್ಸರ, ಪಾಲ್ಗುಣ ಬಹುಳ ೩ರ ಶುಕ್ರವಾರದಂದು ಕರ್ನಾಟಕ ಭೂಮಂಡಲ ಮಧ್ಯದ ಕುಂತಲ (ಹಂಪಿ) ದಲ್ಲಿ ಕುಂತು ಜಿನನಾಥನ ಬಸದಿ ಕಟ್ಟಿಸಿದ ಎಂದು ದಾಖಲಿಸಿದೆ.

ಇದಲ್ಲದೆ ಇಮ್ಮಡಿ ದೇವರಾಯನ ಆಳ್ವಿಕೆಯ ಕಾಲದಲ್ಲಿ ಈಗಿನ ಗಜಶಾಲೆಯ ಹಿಂಭಾಗದಲ್ಲಿರುವ ಜೈನಬಸದಿಯನ್ನು ನಿರ್ಮಿಸಿದ್ದರ ಬಗ್ಗೆ ದಾಖಲಿಸಿದೆ. "ಗುಣನಿಧಿರಭಿನವದೇವರಾಜ ಮಹಾರಾಜೋ ನಿಜಾಜ್ಞಪರಿಪಾಲಿತ ಕರ್ಣಾಟ ದೇಶ ಮಧ್ಯವರ್ತಿನಃ ಸ್ವಾವಾಸಭೂತ ವಿಜಯನಗರಸ್ಯ ಕ್ರಮುಕ ಪರ್ಣಾಪಣ..... ಧರ್ಮಪ್ರವೃತ್ತಯೇ ಸಕಲಜ್ಞಾನಸಾಮ್ರಾಜ್ಯ ವಿರಾಜಮಾನಸ್ಯ...... ಪಾರ್ಶ್ವನಾಥಸ್ಯಾರ್ಹತಃ ಶಿಲಾಮಯಂ ಚೈತ್ಯಾಲಯಮಚೀಕರತ್...."[4] ಎಂದಿದೆ. ಅಂದರೆ ಗುಣನಿಧಿ ಧರ್ಮಕಾರ್ಯನಿರತನಾದ ಇಮ್ಮಡಿ ದೇವರಾಯನ ಕರ್ನಾಟಕ ದೇಶದ ಮಧ್ಯಭಾಗದಲ್ಲಿರುವ ವಿಜಯನಗರದ ಕ್ರಮುಕ ಪರ್ಣಾಪಣ (ಎಲೆ ಅಡಿಕೆ) ಬೀದಿಯಲ್ಲಿ ಪಾರ್ಶ್ವನಾಥನ ಕಲ್ಲಿನ ಬಸದಿಯನ್ನು ಕಟ್ಟಿಸಿದ ಎಂದು ಹೇಳುತ್ತದೆ. ಈ ಬಸದಿಯನ್ನು ಇಮ್ಮಡಿ ದೇವರಾಯನು "ಸೋಽಯಂ ಶ್ರೀ ದೇವರಾಜೇಶೋ ವಿದ್ಯಾವಿನಯ ವಿಶ್ರುತಃ...... ಶಾಕೇಬ್ದೇ ಪ್ರಮಿತೇ ಯಾತೇ ವಸುಂಸಿಂಧು ಗುಣೇಂದುಭಿಃ ಪರಾಭವಾಬ್ದೇ ಕಾರ್ತಿಕ್ಯಾಂ ಧರ್ಮಕೀರ್ತಿಪ್ರವೃತ್ತಯೇ...."[5] ಎಂದು ಪಾಶ್ವನಾಥ ಬಸದಿಯನ್ನು ವಿದ್ಯಾ ವಿನಯ ಸಂಪನ್ನರಾದ ಧರ್ಮ ಕೀರ್ತಿ ಪ್ರವೃತ್ತಿಯ ಇಮ್ಮಡಿ ದೇವರಾಯನು ಪರಾಭವ ಸಂವತ್ಸರದ ಕಾರ್ತಿಕ ಪೂರ್ಣಿಮೆಯಂದು ಕಟ್ಟಿಸಿದ ಎಂದು ಹೇಳಿದೆ. ಅಂದರೆ ಕ್ರಿ.ಶ ೧೬–೧೦–೧೪೨೬ರಂದು ವಿಜಯನಗರದ ಕ್ರಮುಕ ಪರ್ಣಾಪಣ ಬೀದಿಯಲ್ಲಿ ಪಾರ್ಶ್ವನಾಥನ ಬಸದಿಯನ್ನು ಕಲ್ಲಿನಿಂದ ಕಟ್ಟಿಸಿರುವ ವಿಚಾರ ತಿಳಿಸುತ್ತದೆ.

ಹಾಗೆಯೇ ಕ್ರಿ.ಶ ೧೫೫೭ ಸದಾಶಿವರಾಯನ ಕಾಲದ ಗಾಣಿಗಿತ್ತಿ ಬಸದಿಯ ಬಳಿ ಬಿದ್ದಿದ್ದ ಶಾಸನವು "ಶ್ರೀ ವೀರ (ಪ್ರತಾಪ) ಶ್ರೀ ಸದಾಶಿವ ಮಹಾರಾಯ(ರು) ಪೃಥ್ವಿರಾಜ್ಯಂ ಗೈಉತ್ತಂ ಯಿರಲು ಶ್ರೀ ಮ(ನ್ಮ) ಹಾಮಂಡಳೇಶ್ವರ ಶ್ರೀರಂಗ್ಗರಾಜ ರಾಮರಾಜಅಯನವರು ಬಿಟು ಕೊಟ ಚಿಕದೇವರ ಬಸ್ತಿ ದೇವ ಶಾಂತಿನಾಥ ಸ್ವಾಮಿಗೆ ಕೊಟ (ದೀ)ವಟಿಗೆ(ನ)ಯ"[6] ಎಂದು ದಾಖಲಿಸಿದೆ.

ಅಂದರೆ ಮಹಾರಾಜ ಸದಾಶಿವರಾಯನ ಆಳ್ವಿಕೆಯಲ್ಲಿ ಮಹಾಮಂಡಲೇಶ್ವರ ಶ್ರೀರಂಗರಾಜ ರಾಮರಾಜ ಅಯ್ಯನು ಚಿಕ್ಕದೇವರ ಶಾಂತಿನಾಥ ಬಸದಿಗೆ ದೀವಟಿಗೆಗಾಗಿ ಅಂಗಡಿ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಶಾಂತಿನಾಥ ಬಸದಿ

ಸದಾಶಿವರಾಯನ ಕಾಲಕ್ಕಿಂತಲೂ ಮೊದಲು ಬಹುಶಃ ಸಂಗಮ ಅರಸರ ಕಾಲದಲ್ಲಿ ನಿರ್ಮಾಣವಾಗಿರಬೇಕು. ಸದಾಶಿವರಾಯನ ಕಾಲದಲ್ಲಿ ಆ ಬಸದಿಗೆ ಕೇವಲ ದೀವಟಿಗೆಗಾಗಿ ಅಂಗಡಿಯನ್ನು ದಾನ ನೀಡಲಾಗಿದೆ.

ಈ ಶಾಂತಿನಾಥ ಜಿನ ಮೂರ್ತಿಯನ್ನು ಹಂಪಿಯಲ್ಲಿ ಬಸದಿಗಳು ನಿರ್ಮಾಣ ಆಗುವ ಮೊದಲು ಒಂದು ಗುಹೆಯಲ್ಲಿ ಪ್ರತಿಷ್ಠಾಪಿಸಿದಂತೆ ತಿಳಿದು ಬರುತ್ತದೆ. ಇದನ್ನು ಕುರಿತು ಮಾತಂಗ ಪರ್ವತದ ದಾರಿಯ ಪಶ್ಚಿಮಕ್ಕಿರುವ ಗುಹೆಯ ಮುಂಭಾಗದಲ್ಲಿಯ ಕಾಲದ ಉಲ್ಲೇಖವಿಲ್ಲದ ಶಾಸನವು " ಶ್ರೀ ಶಾಂತಿನಾಥ ದೇವರು"[7] ಎಂದು ಉಲ್ಲೇಖಿಸಿದೆ. ಬಹುಶಃ ಆ ಗುಹೆಯ ಒಳಗಡೆ ಶಾಂತಿನಾಥನ ಜಿನ ಮೂರ್ತಿ ಇರಬಹುದು. ಅದು ಹಂಪಿಯ ಮೊದಲ ಬಸಿದಿಯಾಗಿರಬೇಕು. ಹಂಪಿ ವಿಜಯನಗರ ಅರಸರ ಆಡಳಿತ ಕೇಂದ್ರವಾದ ಮೇಲೆ ಅಲ್ಲಿ ಬಸದಿಗಳ ನಿರ್ಮಾಣ ಆಗಿರಬೇಕು. ಅದರಂತೆ ಗುಹೆಯಲ್ಲಿದ್ದ ಶಾಂತಿನಾಥ ಬಸದಿಯನ್ನು ಬಹುಶಃ ಸಂಗಮ ಅರಸರ ಕಾಲದಲ್ಲಿ ಕಮಲಾಪುರ ಹತ್ತಿರ ಗಾಣಿಗಿತ್ತಿ ಬಸದಿ ನಿರ್ಮಿಸಿ ಅಲ್ಲಿ ಶಾಂತಿನಾಥ ಜಿನನ ಮೂರ್ತಿ ಪ್ರತಿಷ್ಠಾಪಿಸಿರಬೇಕು. ಇದನ್ನು ಬಹುಶಃ ಜೈನ ಎಣ್ಣೆ ವ್ಯಾಪಾರಿ ಸ್ತ್ರೀ ನಿರ್ಮಿಸಿರಬೇಕು ಎನಿಸುತ್ತದೆ.

ವಿಜಯನಗರ ಪೂರ್ವದಲ್ಲಿ ಹಂಪಿಯಲ್ಲಿ ಜನರ ವಾಸ ಕಡಿಮೆ ಇದ್ದು, ಜನರು ತಮ್ಮ ಆರಾಧ್ಯ ದೈವಗಳನ್ನು ಪ್ರಕೃತಿ ಸಹಜ ಗುಹೆಯಲ್ಲಿ ಪ್ರತಿಷ್ಠಾಪಿಸಿ ಆರಾಧಿಸುತ್ತಿದ್ದರು. ವಿಜಯನಗರ ಪೂರ್ವದಲ್ಲಿ ಹಂಪಿಯಲ್ಲಿ ಜನರು ಅಲ್ಪಸಂಖ್ಯಾತರಾಗಿದ್ದಾರೆಂದು, ಅವರಿಗೆ ಆಗ ಸ್ವತಃ ಬಸದಿ ನಿರ್ಮಿಸುವ ಶಕ್ತಿ ಇರಲಿಲ್ಲ. ಬೇರೆ ಭಾಗದ ಯಾವ ಅರಸರೂ ಇವರಿಗೆ ಬಸದಿ ನಿರ್ಮಿಸಿಕೊಡದೇ ಇರಲು ಕಾರಣ ಜೈನರು ಕ್ರಿ.ಶ. ೨–೧೪ನೇ ಶತಮಾನದ ವರೆಗೆ ಹಂಪಿಯಲ್ಲಿ ಕಡಿಮೆ ಪ್ರಮಾಣದಲ್ಲಿರಬೇಕೆನಿಸುತ್ತದೆ.

**೨) ಧರ್ಮ ಗುರುಗಳು:** ಒಂದು ಧರ್ಮವೆಂದ ಮೇಲೆ ಅದಕ್ಕೆ ಧರ್ಮ ಗುರುಗಳು, ಅನುಯಾಯಿಗಳು, ಪ್ರಾರ್ಥನಾ ಮಂದಿರಗಳು ಇರಲೇಬೇಕು. ಅದರಂತೆ ಹಂಪಿಯ ಜೈನ ಧರ್ಮೀಯರಿಗೆ ಧರ್ಮ ಗುರುಗಳಿದ್ದರು. ಪಂಪನ ತಮ್ಮ ಜಿನವಲ್ಲಭ, ಕವಿ ಚಕ್ರವರ್ತಿ ಜನ್ನನಿಗೆ ಇದ್ದ ಧರ್ಮ ಗುರುಗಳ ಪರಂಪರೆಯ ಗುರುಗಳು ಹಂಪಿಯ ಜೈನರಿಗೂ ಧರ್ಮಗುರುಗಳಾಗಿದ್ದರೆಂಬುದು ವಿಶೇಷ. ಇವರೆಲ್ಲರೂ ಕೊಂಡು ಕುಂದಾನ್ವಯಕ್ಕೆ ಸೇರಿದ ಜೈನ ಮುನಿಗಳ ಶಿಷ್ಯರಾಗಿದ್ದಂತೆ ತಿಳಿದು ಬರುತ್ತದೆ. ಹಂಪಿಯ ಜೈನಮುನಿಗಳನ್ನು ಕುರಿತು ಕ್ರಿ.ಶ. ೧೪೨೬ ರ ಇಮ್ಮಡಿ ದೇವರಾಯನ ಕಾಲದ ಶಾಸನವು "ಶ್ರೀ ಮೂಲ ಸಂಘೇಜನಿ ನಂದಿ ಸಂಘ(ಸ್ತ) ಸ್ಮಿನ್....... ಸ್ವಚ್ಚಾಶಯೋಮೂದಿಹ ಪದ್ಮ ನಂದೀ ಆಚಾರ್ಯಃ ಕುಂಡ (ಕುಂದ್ದಾ)

ಖ್ಯೋ ವಕ್ರಗ್ರೀವೋಮಹಾಮತಿಃ"[8] ಎಂದು ದಾಖಲಿಸಿದೆ. ಹಂಪಿಯ ಜೈನ ಗುರು ಪರಂಪರೆಯು ಮೂಲ ಸಂಘದಿಂದ ಹುಟ್ಟಿದ ನಂದಿ ಸಂಘ ಇದು ಕೊಂಡ ಕುಂದಿಯ ದೇಶಿಗ ಗಣಕ್ಕೆ ಸೇರಿದೆ. ಇಲ್ಲಿನ ಮೊದಲ ಆಚಾರ್ಯನೆಂದರೆ ಪದ್ಮನಂದಿ ಆಚಾರ್ಯನಾಗಿದ್ದಾನೆ.

ಮುಂದೆ ಈ ಶಾಸನವು ಜೈನ ಗುರು ಪರಂಪರೆಯ ವಂಶಾವಳಿಯನ್ನು ನೀಡುತ್ತದೆ. "ತತ್ರಾಸೀತ್ಚಾರು ಚಾರಿತ್ರ ರತ್ನ ರತ್ನಾಕರೋ ಗುರುಃ ಧರ್ಮಭೂಷಣ ಯೋಗೇಂದ್ರೋ ಭಟ್ಟಾರಕ ಪದಾಂಚಿತಃ ಭಾತಿ ಭಟ್ಟಾರಕೋ ಧರ್ಮ ಭೂಷಣೋ ಗುಣಭೂಷಣಃ..... ಶಿಷ್ಯಸ್ತಸ್ಯ ಮುನೇರಾಸೀದನಗ್ಗ್ರಲ ತಪೋನಿಧಿಃ ಶ್ರೀ ಮಾನಮರ ಕೀರ್ತ್ಯಾರ್ಯೋ ದೇಶಿಕಾಗ್ರೇಸರಃ ಶಮೀ..."[9] ಎಂದಿದೆ. ಅಂದರೆ ಪದ್ಮನಂದಿಯ ಶಿಷ್ಯ ಧರ್ಮಭೂಷಣ ಯೋಗೇಂದ್ರ ಭಟ್ಟಾರಕ ಇವನ ಪಾದ ಪುಷ್ಪದಲ್ಲಿರುವ ದುಂಬಿಯಂತೆ ಇದ್ದವನು. ಶಿಷ್ಯ ಮುನಿಗಳಲ್ಲಿಯೇ ತಪೋನಿಧಿಯೆನಿಸಿರುವ ಅಮರಕೀರ್ತಿ ದೇಶಿಕನಿದ್ದ ಎಂದು ಹೇಳಿ ಉಳಿದ ಗುರುಗಳನ್ನು ಕುರಿತು ಶಾಸನವು "... ಗುಣೈರರ್ಜಿತೈರಾಚಾರ್ಯೋ ಮರಕೀರ್ತಿಶಿಷ್ಯಗಣಭೃಚ್ಛ್ರೀ ಸಿಂಹನಂದೀವ್ರತೀ ಶ್ರೀಧರ್ಮಭೂಷೋಜನಿ ತಸ್ಯಪಟ್ಟೇ ಶ್ರೀ ಸಿಂಹನಂದ್ಯಾರ್ಯ ಗುರೋಸ್ಸವರ್ಮಾ ಭಟ್ಟಾರಕಃ ಶ್ರೀ ಜಿನಧರ್ಮರಮ್ಯಸ್ತಂಭಾಯಮಾನಃ ಕುಮುದೇಂದು ಕೀರ್ತಿಃ ಪಟ್ಟೇ ತಸ್ಯ ಮುನೇರಾಸೀದ್ವರ್ಧ್ಧಮಾನ ಮುನೀಶ್ವರಃ ಶ್ರೀ ಸಿಂಹ ನಂದಿ ಯೋಗೇಂದ್ರ ಚರಣಾಭೋಜ ಷಟ್ಪದಃ..."[10] ಎಂದು ವಿವರಿಸಿದೆ ಅಂದರೆ ದುರ್ಜನರ ಮದ ಅಡಗಿಸುವ ಧೀರ ಅಮರಕೀರ್ತಿ. ಇವನ ಶಿಷ್ಯ ಸಿಂಹನಂದಿ ಭಟ್ಟಾರಕ. ಇವನು ಜೈನ ಧರ್ಮದ ಆಧಾರ ಸ್ತಂಭದಂತೆ ಇದ್ದನು. ಈತನ ಶಿಷ್ಯ ಕುಮುದೇಂದುಕೀರ್ತಿ. ಇವನು ಸ್ವತಃ ವರ್ಧಮಾನ ಮುನೇಶ್ವರನಂತೆ ಇದ್ದು ಸಿಂಹನಂದಿಯ ಪಾದ ಸೇವಕನಾಗಿದ್ದನೆಂದು ಹೇಳಿ ಮುಂದೆ ಕುಮುದೇಂದು ಕೀರ್ತಿಯ ಶಿಷ್ಯನನ್ನು ಕುರಿತು ಶಾಸನವು "ಶಿಷ್ಯಸ್ತಸ್ಯ ಗುರೋರಾಸೀದ್ಧರ್ಮಭೂಷಣ ದೇಶಿಕಃ ಭಟ್ಟಾರಕ ಮುನಿ........... ಭಟ್ಟಾರಕ ಮುನೇಃ ಪಾದಾವ ಪರ್ವಕಮಲೇಸ್ತುಮಃ"[11] ಎಂದಿದೆ. ಅಂದರೆ ಕುಮುದೇಂದು ಕೀರ್ತಿ ಭಟ್ಟಾರಕನ ಶಿಷ್ಯ ಧರ್ಮಭೂಷಣ ದೇಶಿಕ ಭಟ್ಟಾರಕ ಮುನಿ ಎಂದು ತಿಳಿಸಿದೆ.

**ಹಂಪಿಯ ಜೈನ ಗುರು ಪರಂಪರೆಯನ್ನು ಕೆಳಗಿನಂತೆ ನೋಡಬಹುದು:**

1. ಪದ್ಮ ನಂದಿ (ಕ್ರಿ.ಶ ೧೨೬೧)
2. ಧರ್ಮಭೂಷಣ ಯೋಗೇಂದ್ರ ಭಟ್ಟಾರಕ (ಕ್ರಿ.ಶ ೧೨೮೬)
3. ಅಮರ ಕೀರ್ತಿ ದೇಶಿಕ (ಕ್ರಿ.ಶ ೧೩೧೧)

4. ಸಿಂಹ ನಂದಿ ಭಟ್ಟಾರಕ (ಕ್ರಿ.ಶ. ೧೩೩೬)

5. ಕುಮುದೇಂದು ಕೀರ್ತಿ (ಕ್ರಿ.ಶ. ೧೩೬೧)

6. ಧರ್ಮಭೂಷಣ ದೇಶಿಕ ಭಟ್ಟಾರಕ (ಕ್ರಿ.ಶ ೧೩೮೬)

ಹೀಗೆ ಕ್ರಿ.ಶ ೧೩೮೬ರ ೨ನೇ ಹರಿಹರನ ಗಾಣಿಗಿತ್ತಿ ಬಸದಿಯ ಸ್ತಂಭ ಶಾಸನದಿಂದ ಹಂಪಿಯ ಜೈನ ಗುರು ಪರಂಪರೆಯನ್ನು ರೂಪಿಸಿ ನೋಡಬಹುದು. ಈ ಗುರು ಪರಂಪರೆ ಹಂಪಿಯಲ್ಲಿ ವಿಜಯನಗರ ಸ್ಥಾಪನೆಯಾಗಿರುವುದಕ್ಕಿಂತ ಮುಂಚೆ ೫೦ ವರ್ಷಗಳಿಂದಲೂ ಕ್ರಿಯಾಶೀಲವಾಗಿ ಧಾರ್ಮಿಕ ಕಾರ್ಯದಲ್ಲಿ ತೊಡಗಿತ್ತೆಂದು ಹೇಳಬಹುದು. ಒಬ್ಬೊಬ್ಬ ಮುನಿಗೂ ೨೫ ವರ್ಷಗಳ ಅಂತರ ನೀಡಿದರೆ, ಅವರ ಕಾಲವನ್ನು ಮೇಲಿನಂತೆ ನಿರ್ಧರಿಸಬಹುದು. ಈ ಶಾಸನದಲ್ಲಿ ಬರುವ ಕ್ರಿ.ಶ. ೧೨೮೬ ರಲ್ಲಿ ಇದ್ದಿರಬಹುದಾದ ಧರ್ಮಭೂಷಣ ಯೋಗೇಂದ್ರ ಭಟ್ಟಾರಕನನ್ನೇ ಕೋಟಿಲಿಂಗದ ಬಳಿಯ ರಘುನಂದನ ತೀರ್ಥದ ಬೃಂದಾವನದ ಎದುರು ಕಲ್ಲಿನ ಮೇಲೆ ಇರುವ ಕಾಲದ ಉಲ್ಲೇಖವಿಲ್ಲದ ಶಾಸನವು " ಶ್ರೀ ಧರ್ಮಭೂಷಣ ಭಟ್ಟಾರಕ ದೇವರ ಪಾದ"[12] ಎಂದು ಉಲ್ಲೇಖಿಸುತ್ತದೆ. ಧರ್ಮಭೂಷಣ ಭಟ್ಟಾರಕರು ಇಲ್ಲಿ ತಪಗೈದಿರಬಹುದಾಗಿದೆ.

ಇದಕ್ಕೂ ಮೊದಲು ಕ್ರಿ.ಶ. ೧೦೦೮ರ ಮಹಾನವಮಿ ದಿಬ್ಬದ ವಾಯುವ್ಯಕ್ಕೆ ಕಪ್ಪು ಕಲ್ಲಿನಲ್ಲಿ ಕಡೆದಿರುವ ತುಂಡು ಶಿಲ್ಪಗಳಲ್ಲಿರುವ ಶಾಸನವು ನಿಜಪಾದಪಂಕಜನುತಂ ಕೃತ್ವಾಮುನೀಂದ್ರೋತ್ತಮಃ.... ಶುಭದ ಶ್ರೀ ಶುಕ್ರವಾರೇತಃ ಸನ್ಯಸ್ತೋ ಮಳಧಾರಿದೇವ ಮುನಿಪೋ ದೇವೇಂದ್ರ (ಲೋಕಂ)"[13] ಎಂದು ಉಲ್ಲೇಖಿಸಿದೆ. ಈ ಶಾಸನವು ಕೃತ್ವಾಮುನೀಂದ್ರನ ಪಾದಾರಾಧಕ ಶಿಷ್ಯ ಮಳದಾರಿದೇವ ಮುನಿಪನು ಶುಭ ಶುಕ್ರವಾರದಂದು ಸ್ವರ್ಗಸ್ತನಾದದ್ದನ್ನು ತಿಳಿಸುತ್ತದೆ. ಮಳದಾರಿ ದೇವಮುನಿಪ ಜೈನನೋ ಶೈವನೋ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. ಮಳಧಾರಿ ದೇವ ಮುನಿಪ ಜೈನ ಗುರು ಎಂದಿಟ್ಟುಕೊಂಡರೆ ಹಂಪಿಯಲ್ಲಿ ಜೈನ ಧರ್ಮ ಕ್ರಿ.ಶ. ೯–೧೦ ನೇ ಶತಮಾನದಲ್ಲಿ ಪ್ರಬಲವಾಗಿತ್ತೆಂದು ಹೇಳಬಹುದಾಗಿದೆ.

ಕೃಷ್ಣಸ್ವಾಮಿ ದೇವಾಲಯದಲ್ಲಿರುವ ಕಾಲದ ಉಲ್ಲೇಖವಿಲ್ಲದ ತುಂಡು ಶಾಸನವು "ಸಿಂಗ.... ದೇವರ . ಡ್ಡ ಸ..... ಧರ್ಮಸೇನಾ ಭ.."[14] ಎಂದು ಮತ್ತೊಬ್ಬ ಜೈನಗುರು ಧರ್ಮಸೇನ ಭಟ್ಟಾರಕನನ್ನು ಉಲ್ಲೇಖಿಸುತ್ತದೆ.

ಹಂಪಿಯಲ್ಲಿ ಕ್ರಿ.ಶ. ಎಂಟನೇ ಶತಮಾನದಿಂದಲೇ ಜೈನ ಗುರುಗಳು ನೆಲೆಸಿದ್ದರೆಂದು ಕೆಲವು ಶಾಸನಗಳ ಆಧಾರದಿಂದ ಅರಿಯಬಹುದಾಗಿದೆ.

**೩) ಸಾಮಾನ್ಯ ವ್ಯಕ್ತಿಗಳು:** ಒಂದು ಧರ್ಮದ ಪ್ರಾರ್ಥನಾ ಮಂದಿರಗಳು,

ಗುರುಗಳು ಇದ್ದರೆ ಎಂದಾದರೆ ಅಲ್ಲಿ ಅದರ ಅನುಯಾಯಿಗಳು ಅಥವಾ ಸಾಮಾನ್ಯ ವ್ಯಕ್ತಿಗಳು ಇರಲೇಬೇಕು. ಅದರಂತೆ ಸಾಮಾನ್ಯ ಜೈನ ವ್ಯಕ್ತಿಗಳ ಉಲ್ಲೇಖ ಹಂಪಿ ಶಾಸನಗಳಲ್ಲಿ ಕಂಡುಬರುತ್ತದೆ. ಕ್ರಿ.ಶ ೧೪೦೬ ರ ೧ನೇ ದೇವರಾಯನ ಕಾಲದ ಶಾಸನವು "ಪಾರ್ಥಿವ ಸಂ ಪುಷ್ಯ ಬ೭ ಸೋ ಬ್ಯಾಪಾರಿ ರಾಮಿಸೆಟಿಯ ಮಗ ಚಿಂಮಿಸೆಟಿ..."[15] ಎಂದಿದೆ. ವ್ಯಾಪಾರಿ ರಾಮಿಸೆಟ್ಟಿಯ ಮಗ ಚಿಮ್ಮಿ ಶೆಟ್ಟಿಯ ಉಲ್ಲೇಖ ನೀಡುತ್ತದೆ. ಹಾಗೆಯೇ ಕ್ರಿ.ಶ ೧೫೫೭ ರ ಸದಾಶಿವರಾಯನ ಕಾಲದ ಶಾಸನವು ಶಾಂತಿನಾಥ ಸ್ವಾಮಿಗೆ ಕೊಟ ದೀವಟಿಗೆಯ ಅಂಗಡಿ ಆಯ ಚಿಕವೀರನರಸಂಣಗಳು ಕಟಿಸಿದ ಮಾಳಿಗೆ ಅಂಕಣ ೭.... ಎಂದು ಉಲ್ಲೇಖಿಸುತ್ತದೆ. ಅಂದರೆ ಚಿಕ್ಕವೀರ ನರಸಣ್ಣನು ಶಾಂತಿನಾಥ ಬಸದಿಗೆ ಏಳು ಅಂಕಣದ ಮಾಳಿಗೆ ನಿರ್ಮಿಸಿ ದಾನ ಬಿಟ್ಟಿರುವ ವಿಷಯ ತಿಳಿಸುತ್ತದೆ. ಇವನು ಬಹುಶಃ ಜೈನ ಧರ್ಮೀಯನಾಗಿರಬೇಕೆನಿಸುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ಹಂಪಿಯಲ್ಲಿ ಕ್ರಿ.ಶ. ೧–೨ ನೇ ಶತಮಾನದಲ್ಲಿ ಭದ್ರಬಾಹು ಮುನಿಯಿಂದ ಕರ್ನಾಟಕ ಪ್ರವೇಶಿಸಿದ ಜೈನ ಧರ್ಮ ಹಂಪಿಗೂ ಪ್ರವೇಶಿಸಿ ಇಲ್ಲಿನ ಸ್ಥಳೀಯರೊಂದಿಗೆ ಬೆರೆತು ಇಲ್ಲಿಯೇ ನೆಲೆಸಿ, ನಂತರ ತನ್ನ ಪ್ರಾಕೃತ ಭಾಷೆ ಬಿಟ್ಟು ಇಲ್ಲಿನ ಸ್ಥಳೀಯ ಕನ್ನಡ ಭಾಷೆಯನ್ನು ತನ್ನದಾಗಿಸಿಕೊಂಡು ಸ್ಥಳೀಯರನ್ನು ತನ್ನ ಕಕ್ಷೆಯೊಳಗೆ ಸೇರಿಸಿಕೊಂಡು ಪ್ರಬಲವಾಗಿ ಬೆಳೆದು ನಿಂತಿತು. ಅನಂತರ ವಿಜಯನಗರ ಸ್ಥಾಪನೆಯ ನಂತರ ಅರಸರ ಮನಗೆದ್ದು ಬಸದಿಗಳನ್ನು ಕಟ್ಟಿಸಿಕೊಂಡಂತೆ ತೋರುತ್ತದೆ. ಆ ಮೂಲಕ ಧರ್ಮ ಗುರುಗಳು ಹಂಪಿಗೆ ಬಂದು ನೆಲೆಸಿ ಧರ್ಮಪ್ರಚಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಂತೆ ತಿಳಿದು ಬರುತ್ತದೆ.

## ಕೊನೆ ಟಿಪ್ಪಣಿಗಳು:

1. ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ), (೨೦೦೦), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ –೩, ಹಂಪಿ ಶಾಸನಗಳು, ಶಾಸನ ಸಂಖ್ಯೆ. ೩೯೯, ಪು.ಸಂ. ೨೮೬
2. ಅದೇ, ಶಾಸನ ಸಂಖ್ಯೆ. ೩೫೦, ಪು.ಸಂ. ೨೫೫
3. ಅದೇ, ಶಾಸನ ಸಂಖ್ಯೆ. ೩೫೦, ಪು.ಸಂ. ೨೫೫
4. ಅದೇ, ಶಾಸನ ಸಂಖ್ಯೆ. ೩೨೭, ಪು.ಸಂ. ೨೪೧
5. ಅದೇ, ಶಾಸನ ಸಂಖ್ಯೆ. ೩೨೭, ಪು.ಸಂ. ೨೪೨
6. ಅದೇ, ಶಾಸನ ಸಂಖ್ಯೆ. ೩೫೧, ಪು.ಸಂ. ೨೫೬
7. ಅದೇ, ಶಾಸನ ಸಂಖ್ಯೆ. ೯೭, ಪು.ಸಂ. ೯೦
8. ಅದೇ, ಶಾಸನ ಸಂಖ್ಯೆ. ೩೫೦, ಪು.ಸಂ. ೨೫೪
9. ಅದೇ, ಶಾಸನ ಸಂಖ್ಯೆ. ೩೫೦, ಪು.ಸಂ. ೨೫೪
10. ಅದೇ, ಶಾಸನ ಸಂಖ್ಯೆ. 349
11. ಅದೇ, ಶಾಸನ ಸಂಖ್ಯೆ. ೨೫೪, ಪು.ಸಂ. ೨೫೫
12. ಅದೇ, ಶಾಸನ ಸಂಖ್ಯೆ. ೧೨೨, ಪು.ಸಂ. ೧೫೬
13. ಅದೇ, ಶಾಸನ ಸಂಖ್ಯೆ. ೨೫೪, ಪು.ಸಂ. ೧೯೫
14. ಅದೇ, ಶಾಸನ ಸಂಖ್ಯೆ. ೮೦, ಪು.ಸಂ. ೭೯
15. ಅದೇ, ಶಾಸನ ಸಂಖ್ಯೆ. ೩೦೪, ಪು.ಸಂ. ೨೨೧

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.